

ಇಂಡಿಯಲ್ಲಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಅಕ್ಕಮಹಾದೇವಿ ಮಹಿಳಾ ವಿವಿಗೆ ಸಿಂಡಿಕೇಟ್ ಸದಸ್ಯರಾಗಿ ಆಯ್ಕೆಯಾದ ಪ್ರೊ.ಶಿವಯೋಗೆಪ್ಪ ಜೆ.ಮಡ್ಯಾಳ ಅವರನ್ನು ಸನ್ಮಾನಿಸಲಾಯಿತು.

## ಉಪನ್ಯಾಸ ಕಾರ್ಯಕ್ರಮ | ಡಾ.ಬಾಳಾಸಾಹೇಬ ಬಣ್ಣನೆ

# ಖಾಸನೀಸ್ ಹೊಸ ಪರಂಪರೆ ಕತೆಗಾರ

**ಇಂಡಿ:** ''ರಾಘವೇಂದ್ರ ಖಾಸನೀಸ್ ಅವರು ಕನ್ನಡ ಕಥನ ಮಾರ್ಗದಲ್ಲಿ ಹೊಸ ಪರಂಪರೆಯನ್ನು ಹುಲುಸಾಗಿ ಬೆಳೆಸಿದವರು. ಅವರನ್ನು ಗುರುತಿಸುವ ಕಾರ್ಯ ಅಷ್ಟಾಗಿ ನಡೆಯದಿರುವುದು ವಿಷಾದನೀಯ,'' ಎಂದು ಹಿರಿಯ ಕಾದಂಬರಿಕಾರ ಡಾ.ಬಾಳಾಸಾಹೇಬ ಲೋಕಾಪುರ ಹೇಳಿದರು.

ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಕನ್ನಡ ಕಥನ ಮಾರ್ಗ-ರಾಘವೇಂದ್ರ ಖಾಸನೀಸರ ಕತೆಗಳು' ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

''ಇಂಡಿ ನೆಲವು ಮಧುರ ಚೆನ್ನ, ಕಾಪಸೆ ರೇವಪ್ಪನವರ, ಪಿ.ಧೂಲಾಸಾಹೇಬ, ಸಿಂಪಿ ಲಿಂಗಣ್ಣ, ಹಲಸಂಗಿ ಗೆಳೆಯರ ಬಳಗದ ಕಾರ್ಯವನ್ನು ಈಗಿಗ ಸ್ಮರಿಸುತ್ತಿದೆ. ಆದರೆ, ಕತೆಗಾರ ರಾಘವೇಂದ್ರ ಖಾಸನೀಸರು ಹಾಗೂ ಶ್ರೀರಂಗರನ್ನು ಸ್ಮರಿಸುವಲ್ಲಿ ಹಾಗೂ ಅವರ ಕತೆಗಳ ಕುರಿತು ತಿಳಿಯುವಲ್ಲಿ ಹಿಂದೆ ಉಳಿದಿದ್ದೇವೆ,'' ಎಂದರು.

ವಿಮರ್ಶಕ ಮನು ಪತ್ತಾರ ಉಪನ್ಯಾಸ ನೀಡಿ, ''ಹೊಸ ತಲೆಮಾರಿನ ಕತೆಗಾರರು ಖಾಸನೀಸರ ಕತೆಗಳನ್ನು ಓದಬೇಕಿದೆ'' ಎಂದು ಆಶಯ ವ್ಯಕ್ತಪಡಿಸಿದರು.

ಪ್ರಾಚಾರ್ಯ ಡಾ.ರಮೇಶ ಆರ್.ಎಚ್., ಕಸಾಪ ತಾಲೂಕು ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ ಮಾತನಾಡಿದರು. ಶರಣು ಸಬರದ, ಡಿ.ಎನ್.ಅಕ್ಕಿ, ಡಾ.ರಮೇಶ ಕತ್ತಿ, ಪೂಜಾ ಸಾರವಾಡ, ಕಾಶೀನಾಥ ಜಾಧವ ಮತ್ತಿತರರಿದ್ದರು.

ಇಂಡಿ ಪಟ್ಟಣದಲ್ಲಿ ಜನಿಸಿದ ರಾಘವೇಂದ್ರ ಖಾಸನೀಸರು ಅಲಕ್ಷಿತರಾಗಿದ್ದಾರೆ. ಅವರನ್ನು ಅವರ ಸಾಹಿತ್ಯವನ್ನು ಮುನ್ನೆಲೆಗೆ ತರುವ ಕಾರ್ಯವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಮಾಡಿದೆ.-**ಪದ್ಮಿನಿ ನಾಗರಾಜು**, ಗೌರವ ಕಾರ್ಯದರ್ಶಿ, ಕಸಾಪ.